


## ಕಾಯ್ದೆಯ ಉದ್ದೇಶಗಳು

1. ಇ–ಕ್ರೀಡೆಗಳು ಮತ್ತು ಶೈಕ್ಷಣಿಕ ಆಟಗಳ ಉತ್ತೇಜನ: ಆನ್‌ಲೈನ್/ಇ–ಕ್ರೀಡೆಗಳನ್ನು ಕಾನೂನುಬದ್ಧ ಕ್ರೀಡೆಯಾಗಿ ಗುರುತಿಸಿ, ಅದನ್ನು ಶೈಕ್ಷಣಿಕ ಮತ್ತು ಸಾಮಾಜಿಕ ಆಟವನ್ನಾಗಿ ಉತ್ತೇಜಿಸುವುದು. ಇದರಿಂದ ಭಾರತವು ಜಾಗತಿಕ ಗೇಮಿಂಗ್ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರಲು ಸಹಾಯವಾಗುತ್ತದೆ.
2. ಹಣಕಾಸಿನ ಆಟಗಳ ನಿಷೇಧ: ಹಣದ ವಹಿವಾಟು ಆಧರಿಸಿದ ಆನ್‌ಲೈನ್ ಆಟಗಳನ್ನು (ಬೆಟ್ಟಿಂಗ್, ಅದೃಷ್ಟ, ಕೌಶಲ ಅಥವಾ ಅವುಗಳ ಸಂಯೋಜನೆ) ಸಂಪೂರ್ಣವಾಗಿ ನಿಷೇಧಿಸುವುದು. ಇದು ಯುವ ಜನರನ್ನು ಚಟ, ಆರ್ಥಿಕ ದಿವಾಳಿತನ ಮತ್ತು ಮಾನಸಿಕ ಒತ್ತಡದಿಂದ ರಕ್ಷಿಸುವ ಗುರಿ ಹೊಂದಿದೆ.

## ಕಾಯ್ದೆಯ ವೈಶಿಷ್ಟ್ಯಗಳು

**1. ಮುಖ್ಯ ವಿಭಾಗಗಳು:** ಈ ಕಾಯ್ದೆಯು ಆನ್‌ಲೈನ್ ಗೇಮ್‌ಗಳನ್ನು ಮೂರು ವಿಭಾಗಗಳಾಗಿ ವಿಂಗಡಿಸಿದೆ. ಅವುಗಳೆಂದರೆ ‘ಇ–ಕ್ರೀಡೆಗಳು’ (ಇವು ಕೌಶಲ್ಯದ ಆಧಾರದ ಮೇಲೆ ಆಡುವ ಸ್ಪರ್ಧಾತ್ಮಕ ಆಟಗಳು), ‘ಆನ್‌ಲೈನ್ ಸಾಮಾಜಿಕ ಆಟಗಳು’ (ಇವು ಮನರಂಜನೆ, ಶಿಕ್ಷಣ ಅಥವಾ ಸಾಮಾಜಿಕ ಸಂವಹನಕ್ಕಾಗಿ ಇರುವ ಆಟಗಳು) ಮತ್ತು ‘ಆನ್‌ಲೈನ್ ಹಣದ ಆಟಗಳು’ (ಇವು ಹಣವನ್ನು ಹೂಡಿ ಆಡುವ ಆಟಗಳು. ಇದರಲ್ಲಿ ಕೌಶಲ್ಯ ಮತ್ತು ಅದೃಷ್ಟ ಎರಡೂ ಸೇರಿರಬಹುದು).

**2. ರಾಷ್ಟ್ರೀಯ ಆನ್‌ಲೈನ್ ಗೇಮಿಂಗ್ ಕಮಿಷನ್ (NOGC):** ಆನ್‌ಲೈನ್ ಗೇಮಿಂಗ್‌ಗೆ ಪರವಾನಗಿ ನೀಡಲು ಮತ್ತು ನಿಯಂತ್ರಿಸಲು, ಒಂದು ಕೇಂದ್ರೀಯ ಪ್ರಾಧಿಕಾರವನ್ನು ಸ್ಥಾಪಿಸಲಾಗುವುದು. ಈ ಪ್ರಾಧಿಕಾರವು ಆಟಗಳನ್ನು ವರ್ಗೀಕರಿಸುತ್ತದೆ. ದೂರುಗಳನ್ನು ತನಿಖೆ ಮಾಡುತ್ತದೆ ಮತ್ತು ಕಾನೂನುಬಾಹಿರ ಆಟಗಳನ್ನು ನಿರ್ಬಂಧಿಸುವ ಅಧಿಕಾರವನ್ನು ಹೊಂದಿರುತ್ತದೆ.

**3. ಇ–ಕ್ರೀಡೆಗಳ ಗುರುತಿಸುವಿಕೆ:** ಇಕ್ರೀಡೆಗಳನ್ನು ರಾಷ್ಟ್ರೀಯ ಕ್ರೀಡಾ ಚೌಕಟ್ಟಿನಲ್ಲಿ ಕಾನೂನುಬದ್ಧ ಕ್ರೀಡೆಯಾಗಿ ಗುರುತಿಸುವುದು ಮತ್ತು ಅದಕ್ಕೆ ತರಬೇತಿ ಅಕಾಡೆಮಿಗಳು, ಸಂಶೋಧನಾ ಕೇಂದ್ರಗಳು ಮತ್ತು ಗೇಮಿಂಗ್ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಲಾಗುವುದು.

**4. ಹಣಕಾಸಿನ ಆಟಗಳ ನಿಷೇಧ ಮತ್ತು ಶಿಕ್ಷೆ/ದಂಡ:** ಹಣವನ್ನು ಒಳಗೊಂಡ ಆನ್‌ಲೈನ್ ಆಟಗಳನ್ನು ನಡೆಸುವುದನ್ನು ಮತ್ತು ಅವುಗಳ ಜಾಹೀರಾತು ಮಾಡುವುದನ್ನು ತಡೆಯುವುದು ಹಾಗೂ ಇದಕ್ಕೆ ವಿರುದ್ಧವಾಗಿ ಕಾರ್ಯನಿರ್ವಹಿಸಿದರೆ 3 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 1 ಕೋಟಿ ರೂಪಾಯಿವರೆಗೆ ದಂಡ ವಿಧಿಸಲಾಗುವುದು. ಕಾನೂನುಬಾಹಿರ ವೆಬ್‌ಸೈಟ್‌ಗಳು ಮತ್ತು ಆ್ಯಪ್‌ಗಳನ್ನು ನಿರ್ಬಂಧಿಸಲು ಸರ್ಕಾರಕ್ಕೆ ಅಧಿಕಾರವಿದೆ.

**5. ಗ್ರಾಹಕರ ರಕ್ಷಣೆ:** ಆಟಗಾರರ ಗುರುತು ಮತ್ತು ವಯಸ್ಸಿನ ಪರಿಶೀಲನೆ ಕಡ್ಡಾಯವಾಗಿರುತ್ತದೆ. ಕಿರಿಯರಿಗೆ ಪ್ರವೇಶವನ್ನು ನಿರ್ಬಂಧಿಸಲಾಗುವುದು. ಸ್ವಯಂನಿರ್ಬಂಧನೆ, ಸಮಯದ ಮಿತಿ, ಮತ್ತು ಠೇವಣಿ ಮಿತಿಗಳಂತಹ ಜವಾಬ್ದಾರಿಯುತ ಗೇಮಿಂಗ್ ವೈಶಿಷ್ಟ್ಯಗಳನ್ನು ಕಡ್ಡಾಯಗೊಳಿಸಲಾಗಿದೆ.

**6. ಜಾಹೀರಾತು ನಿಯಂತ್ರಣ:** ನೇರ ಹಾಗೂ ಪರೋಕ್ಷ ಹಣಕಾಸಿನ ಆಟಗಳ ಜಾಹೀರಾತು ಅಥವಾ ಸೆಲೆಬ್ರಿಟಿ ಒಪ್ಪಿಗೆಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಜಾಹೀರಾತುಗಳು ಜವಾಬ್ದಾರಿಯುತ ಗೇಮಿಂಗ್ ಎಚ್ಚರಿಕೆಗಳನ್ನು ಒಳಗೊಂಡಿರಬೇಕು.

**7. ಆರ್ಥಿಕ ಮೇಲ್ವಿಚಾರಣೆ:** ಪರವಾನಗಿ ಪಡೆದ ಪ್ಲಾಟ್‌ಫಾರ್ಮ್‌ಗಳು ಗ್ರಾಹಕರ ಹಣವನ್ನು ಪ್ರತ್ಯೇಕ ಖಾತೆಗಳಲ್ಲಿ ಇರಿಸಬೇಕು ಮತ್ತು ಮರುಪಾವತಿಯನ್ನು ಖಾತರಿಪಡಿಸಬೇಕು.

**8. ಕಾರ್ಪೊರೇಟ್ ಮತ್ತು ಸಾಂಸ್ಥಿಕ ಹೊಣೆಗಾರಿಕೆ:** ತಾವು ‘ಸೂಕ್ತ ಜಾಗರೂಕತೆ’ ವಹಿಸಿದ್ದೇವೆ ಎಂದು ಸಾಬೀತುಪಡಿಸದ ಹೊರತು, ಈ ಕಾಯ್ದೆಯ ಅಡಿಯಲ್ಲಿ ಬರುವ ಅಪರಾಧಗಳಿಗೆ ಕಂಪನಿಗಳು ಮತ್ತು ಅವುಗಳ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.

**9. ಕಾನೂನು ಅಂತರಗಳನ್ನು ಮುಚ್ಚುವುದು:** ಜೂಜು ಮತ್ತು ಬೆಟ್ಟಿಂಗ್‌ಗಳು ಈಗಾಗಲೇ ಭಾರತೀಯ ನ್ಯಾಯಸಂಹಿತೆ 2023, ಮತ್ತು ವಿವಿಧ ರಾಜ್ಯ ಕಾನೂನುಗಳ ಅಡಿಯಲ್ಲಿ ನಿರ್ಬಂಧಿತವಾಗಿವೆ. ಆದರೆ ಆನ್‌ಲೈನ್ ಜಗತ್ತು ಹೆಚ್ಚಾಗಿ ಯಾವುದೇ ನಿಯಂತ್ರಣವಿಲ್ಲದೆ ಉಳಿದಿತ್ತು. ಈ ಮಸೂದೆಯು, ಭೌತಿಕ ಮತ್ತು ಡಿಜಿಟಲ್ ಜಾಗಗಳೆರಡರಲ್ಲೂ ಒಂದೇ ರೀತಿಯ ನಿಯಮಗಳು ಅನ್ವಯವಾಗುತ್ತವೆ ಎಂದು ಖಚಿತಪಡಿಸುತ್ತದೆ.

**10. ಅನ್ವಯಿಕತೆ:** ಈ ಶಾಸನವು ಇಡೀ ಭಾರತಕ್ಕೆ ಅನ್ವಯಿಸುತ್ತದೆ. ಹಾಗೆಯೇ, ಇದು ಭಾರತದೊಳಗೆ ನೀಡಲಾಗುವ ಅಥವಾ ಭಾರತದ ಹೊರಗಿನಿಂದ ಕಾರ್ಯನಿರ್ವಹಿಸುವ ಆನ್‌ಲೈನ್ ಹಣದ ಗೇಮಿಂಗ್ ಸೇವೆಗಳಿಗೂ ಅನ್ವಯಿಸುತ್ತದೆ.

## ಕಾಯ್ದೆಯ ಒಳಿತು ಕೆಡುಕುಗಳು

### ಒಳಿತುಗಳು

1. ಗ್ರಾಹಕರ ರಕ್ಷಣೆ: ಹಣಕಾಸಿನ ಆಟಗಳಿಂದ ಉಂಟಾಗುವ ಚಟ, ಆರ್ಥಿಕ ನಷ್ಟ ಮತ್ತು ಮಾನಸಿಕ ಸಮಸ್ಯೆಗಳಿಂದ ಈ ಕಾಯ್ದೆ ಯುವ ಜನರನ್ನು ರಕ್ಷಿಸುತ್ತದೆ.
2. ಇ–ಕ್ರೀಡೆಗಳ ಉತ್ತೇಜನ: ಇಕ್ರೀಡೆಗಳನ್ನು ಒಂದು ಕಾನೂನುಬದ್ಧ ಕ್ರೀಡೆಯಾಗಿ ಗುರುತಿಸುವುದರಿಂದ, ಭಾರತೀಯ ಆಟಗಾರರಿಗೆ ಜಾಗತಿಕ ಟೂರ್ನಮೆಂಟ್‌ಗಳಲ್ಲಿ ಭಾಗವಹಿಸಲು ಅವಕಾಶವಿದೆ.
3. ಸ್ಥಳೀಯ ಗೇಮ್ ಡೆವಲಪರ್‌ಗಳಿಗೆ ಬೆಂಬಲ: ಶೈಕ್ಷಣಿಕ ಮತ್ತು ಸಾಮಾಜಿಕ ಆಟಗಳ ಉತ್ತೇಜನದಿಂದ ಭಾರತೀಯ ಸ್ಟಾರ್ಟ್‌ಅಪ್‌ಗಳಿಗೆ ಮತ್ತು ಗೇಮ್ ಡೆವಲಪರ್‌ಗಳಿಗೆ ಹೊಸ ಅವಕಾಶಗಳು ತೆರೆಯುತ್ತವೆ.
4. ರಾಷ್ಟ್ರೀಯ ಭದ್ರತೆ: ಕಾನೂನುಬಾಹಿರ ಹಣಕಾಸಿನ ಆಟಗಳಿಂದ ಉಂಟಾಗುವ ಮನಿ ಲಾಂಡರಿಂಗ್ ಮತ್ತು ಭಯೋತ್ಪಾದಕ ಚಟುವಟಿಕೆಗಳಿಗೆ ಧನಸಹಾಯದ ಅಪಾಯವನ್ನು ಕಡಿಮೆ ಮಾಡುತ್ತದೆ.
5. ವಂಚನೆಗೆ ಕಡಿವಾಣ: ಅಕ್ರಮ ಹಣಕಾಸು ವಹಿವಾಟು ಮತ್ತು ಸೈಬರ್ ವಂಚನೆಗೆ ಕಡಿವಾಣ ಹಾಕಲು ಸಹಾಯ ಮಾಡುತ್ತದೆ.

